ಇಸ್ತಿಹಾರ್ನಾವೆ.

ತಾರೀಖು 14ನೆ ಅಕ್ಟೋಬರು 1909.

ಚಿಕ್ಕಮಗಳೂರು ತಾಲ್ಲೂಕು ಲಕ್ಯಾ ಹೋಬಳಿಗೆ ಸೇರಿದ ಜೋಡಿ ಮಾಚೇನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ಚಿಕ್ಕಮಗಳೂರು ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರು ಮಾಹೆ 29ನೆ ತಾರೀಖು ದಿವಿ 11 ಘಂಟೆಗೆ ಖಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲು ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 21ನೆ ಮುಕ್ತಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 828ನೆ ನಂಬರು ಪುಟವನ್ನು ನೋಡತಕ್ಕದ್ದು).

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕವಿಷನರ್.

ನೋ ಟಿ ಸ್.

ಹೊಳೇನರಶೀಪುರದ ಸಬ್ ಡಿವೀಜ್ಯ ಮ್ಯುನ್ಶೀಫ್ ಕೋರ್ಟಿನಲ್ಲಿ.

1908—1909ನೆ ಇಸವಿ ಅಸಲ್ ನಂಬರ್ 457.

ವಾದಿ.	ಪ್ರತಿವಾದಿಗಳು.
ಅರ್ಕಲಗೂಡು ತಾಲ್ಲೂಕು ಕೊಣನೂರು ಕಸಬಾದಲ್ಲಿ ಇರುವ ಕಸಬಾ ಶಾನುಭೋಗ ಸುಬ್ಬರಾಯರು.	ಸದರಿ ತಾಲ್ಲೂಕು ಕೊಣನೂರು ಹೋಬಳಿ ಅಕ್ಕಲವಾಡಿ ಗ್ರಾಮದಲ್ಲಿ ಇರುವ ಪಟೇಲ್ ಅಪ್ಪಣ್ಣಿ ಗೌಡನ ಮಗ ಚಿಕ್ಕೆಗೌಡ ವಗೈರೆ.

ಈ ಕೆಳಗಿನ ಷೆಡ್ಯೂಲ್ ಜಮೀನ್ ಮೇಲೆ ಪ್ರತಿವಾದೀರು ಮತ್ತು ಇತರರು ಪ್ರವೇಶ ಮಾಡಕೂಡದೆಂತಲೂ ಮತ್ತು ಸದರಿ ಜಮೀನ್ನಲ್ಲಿ ಇರತಕ್ಕ ಕಲ್ಲುಭಾವಿಯಿಂದ ನೀರು ತೆಗೆದುಕೊಂಡು ಹೋಗಕೂಡದೆಂತಲೂ ಖಾಯಂ ಇಂಜೆಕ್ಷನ್ ಕೊಡಿಸುವದರ, ಮೂಲಕ ನಿರ್ಬಂಧಪಡಿಸಬೇಕೆಂದು ವಾದಿ ದಾವೆ ಮಾಡಿರುತ್ತಾರೆ. ಸದರಿ ವೊಕದ್ದಮಾವನ್ನು ಹೀರಂಗ್ ಬಗ್ಯೆ 1909ನೆ ಇಸವಿ ನವೆಂಬರ್ ತಾರೀಖು 1-ನೆ ಗುರುವಾರಕ್ಕೆ ಇಟ್ಟಿರುತ್ತೆ. ಮೇಲೆ ಕಂಡಂತೆ ಇಂಜೆಕ್ಷನ್ ಆರ್ಡರ್ ಕೊಡಕೂಡದೆಂಬ ಮತ್ತು ಸದರಿ ಸ್ವತ್ತಿನಲ್ಲಿ ಹಕ್ಕು ಬಾಧ್ಯತೆ ಸಮಂಜಸವುಳ್ಳವರು ಮತ್ತು ಕಕ್ಷಿಗಾರರಾಗಿ ಸೇರಲು ಇಷ್ಟವುಳ್ಳವರು ಸಹಾ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ರೂಲ್ಸು ಮೇರೆ ನಡಿಸಲ್ಪಡುತ್ತೆ.

ಬ ತಾರೀಖು 19ನೆ ಅಕ್ಟೋಬರು ಸ್ಯ 1909ನೆ ಇಸವಿ.

ಷೆಡ್ಯೂಲ್.

ಅರಕಲಗೂಡು ತಾಲ್ಲೂಕು ಕೊಣನೂರು ಹೋಬಳಿ ಅಕ್ಕಲವಾಡಿ ಗ್ರಾಮದಲ್ಲಿ ಪೂರ್ವಕ್ಕೆ—31ನೆ ನಂಬರು ಜಮೀನ್, ಪಶ್ಚಿಮಕ್ಕೆ—33ನೆ ನಂಬರು ಜಮೀನ್, ದಕ್ಷಿಣಕ್ಕೆ—30ನೆ ನಂಬರು ಜಮೀನ್, ಉತ್ತರಕ್ಕೆ ಕೆರೆ, ಈ ಮಧ್ಯೆ ಇರುವ ತರಿ ಎರಡು ಎಕರೆ ಐದುಗುಂಟೆ, ಖುಷ್ಕಿ ಎರಡು ಎಕರೆ ನಾಲ್ಕು ಗುಂಟೆ, ಆಕಾರ ಒಂಭತ್ತು ರೂಪಾಯಿವುಳ್ಳ ಈ ನಂಬರಿನಲ್ಲಿ ಬಾಗಾಯಿತು ಆಗಿರುತ್ತೆ.

ಪಿ. ಮಹದೇವಯ್ಯ,
ಮುನ್ಸೀಫ್.

ಪ್ರಸಿದ್ಧ ಪತ್ರಿಕೆ.

ಒಳ್ಳೇ ಸಮಯ!

ಶ್ರೀಮಂ ಮಹಾರಾಜರವರ ಗೌರ್ನಮೆಂಟಿನವರು ಈ ರೈಲ್ವೆಗಾಗಿ ಖರ್ಚಾದ ಮೊಬಲಗಿನ ಮೇಲೆ ಶೇಕಡ 4 ರಂತೆ ಡಿವಿಡೆಂಡನ್ನು ಕೊಡುವಹಾಗೆ ಭರವಸೆಯನ್ನು ದಯಪಾಲಿಸಿರುತ್ತಾರೆ; ಮತ್ತು ಇದಕ್ಕಿಂತಲೂ ಹೆಚ್ಚಾದ ಲಾಭವು ದೊರೆಯುವ ಸಂದರ್ಭವೂ ಉಂಟು.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

1895ನೆ ಇಸವಿಯ 5ನೆ ಮೈಸೂರು ಕಂಪೆನಿ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಧೆ.

ಮುಖ್ಯ ಆಫೀಸು :—ಬೆಂಗಳೂರು ಚಾಮರಾಜಪೇಟೆ; ಬ್ರಾಂಚ್ ಆಫೀಸು :—ಬೊಂಬಾಯಿ ಕೋಟೆ.

ಮೂಲಧನ 12,00,000 ರೂಪಾಯಿಗಳು.

ಷೇರುಗಳು :—

ಷೇರು 1ಕ್ಕೆ 25 ರೂಪಾಯಿ ಉಳ್ಳ 48,000 ಷೇರುಗಳಾಗಿ ಮೇಲ್ಕಂಡ ಮೂಲಧನವು ಭಾಗಿಸಲ್ಪಟಿಧೆ. ಇದರ ಪೈಕಿ ಆಗಲೇ 35,000 ಷೇರುಗಳು ಬಿಕರಿಯಾಗಿಧೆ. ಉಳಿದ 13,000 ಷೇರುಗಳನ್ನು ಈಗ ಜನಗಳು ತೆಗದುಕೊಳ್ಳಬಹುದು.

ಷೇರುಗಳನ್ನು ತೆಗೆದುಕೊಳ್ಳತಕ್ಕವರು ಪಾವತಿ ಮಾಡತಕ್ಕ ಮೊಬಲಗಿನ ವಿವರ :—ಅಪ್ಲಿಕೇಷನ್ನೊಂದಿಗೆ ಷೇರು 1ಕ್ಕೆ 1 ರೂಪಾಯಿಯೂ, ಹಂಚಿಕೆಯ ಕಾಲದಲ್ಲಿ ಷೇರು 1ಕ್ಕೆ 4 ರೂಪಾಯಿಯೂ, ಉಳಿದ 20 ರೂಪಾಯಿಗಳು 4 ಕಂತುಗಳಲ್ಲಿ ಕಂತು 1ಕ್ಕೆ 5 ರೂಪಾಯಿನಂತೆ ನೋಟಿಸ್ ಬಂದ ಕಾಲದಲ್ಲಿ ಕೊಡತಕ್ಕದ್ದು. ಬಂದೊಂದು ಕಂತಿಗೂ 2 ತಿಂಗಳಿಗೆ ಕಡಮೆ ಇಲ್ಲದಂತೆ ವ್ಯವಧಾನ ಕೊಡಲ್ಪಡುವದು.